Regd No M 1299 34 th Year ತಾ|| 23—8—51

SATYAV.ADI

ಸತ್ಯವಾದಿ

ಸಾಪ್ತಪಕರು- ಅರಮನೆ ಸಿರಸ್ತೆದಾರ್ ಎಂ. ಏ. ಸುಬ್ರಾಯರು [ಬಿಡಿ ಪ್ರತಿ 3 ಪೈ

ಶಾಂತಿ ಪರಿಷತ್ತಿನಲ್ಲಿ ಭಾರತ ಇರಬೇಕು

ಜವಾಹ್ ಶಾಂತಿ ಪರಿಷತ್‌ನಲ್ಲಿ ಭಾರತ ಭಾಗವಹಿಸಬೇಕೆಂದು ಮೈಸೂರಿನ ಮಾಜಿ ಸಚಿವ ಶ್ರೀ ಎಸ್ ಪಿ ಗೋಪಾಲಾಚಾರಿಯವರು ಬೆಂಗಳೂರಿನಲ್ಲಿ ತಿಳಿಸಿದ್ದಾರೆ.

ದೇಶ ರಕ್ಷಣೆಗಾಗಿ ಅರ್ಧ ಲಕ್ಷ ಸ್ವಯಂ ಸೇವಕರು

ರಾಷ್ಟ್ರದ ಸಂರಕ್ಷಣೆಗಾಗಿ ಪಂಜಾಬ್ ಶಾಖೆ ಮುಜ್ಲಿಸ್-ಇ-ಅಮಾಕಾರಿ ಇಸ್ಲಾಂ ಪಾಕ್ ಪ್ರಧಾನ ಲಿಯಾಕತ್ ಅಲಿಯವರಿಗೆ ಅರ್ಧ ಲಕ್ಷ ರಜಕಾರ್ ಸ್ವಯಂ ಸೇವಕರನ್ನು ಕೊಡುವದಾಗಿ ತಿಳಿಸಿದೆ— ಹೀಗೆಂದು ಲಾ ಹೊ ರ್ ವಾರ್ತೆ.

ಬಿಕ್ಕಟ್ಟು ಬಗೆಹರಿಸುವ ಪ್ರಯತ್ನ

ದೆಹಲಿಯಲ್ಲಿ ಸರ್ವಾವೇಶವಾಗುವ ಎ ಐ. ಸಿ. ಸಿ. ಯಲ್ಲಿ ಕಾಂಗ್ರೆಸ್ ನಲ್ಲುಂಟಾಗಿರುವ ಬಿಕ್ಕಟ್ಟನ್ನು ಪರಿಹರಿಸುವ ಪ್ರಶ್ನ ಮಾಡಲಾಗುವದೆಂದು ವರದಿಯಾಗಿದೆ

ಮೈಸೂರು ಸರ್ಕಾರಿ ಪ್ರಕಟಣೆ

ಆಗಸ್ಟ್ 15 ನೆ ತಾ|| ಗೆ ಕೊನೆಯಾದ ಆಹಾರೋತ್ಪಾದನೆ ಚಳವಳದ ಪಾಕ್ಷಿಕ ಪ್ರಗತಿಯುತ ವಾದಿಯನ್ನು ಮೈಸೂರು ಸರ್ಕಾರ ಸ್ಪಕಟಿಸಿದೆ

ಕಂದಾಯ ಮಾಫಿ

ಹೊಸಕೆರೆ ತಾಲ್ಲೂಕಿನ ಅವಾನಿ ದೊಡ್ಡಕೆರೆ ಕೆಳಗೆ ಇರುವ ಹದಿನಾಲ್ಕು ಗ್ರಾಮಗಳಲ್ಲಿ ಬೆಳೆ ಕೆಟ್ಟ ಪ್ರಯುಕ್ತ 50-51 ಸಾಲಿಗೆ ಕಂದಾಯ ರೂ 4640-0-10 ನ್ನು ಮೈಸೂರು ಸರ್ಕಾರ ಮನ್ನಾ ಮಾಡಿದೆ.

ಕೃಷ್ಣಾಪುರದಲ್ಲಿ ಕೃಹೊಣೀತ್ಸವ

ಟಿ. ನರಸೀಪುರದ ತಾಲ್ಲೂಕು ಕೃಷ್ಣಾಪುರದ ಶ್ರೀ ಸುತ್ತೂರ ಗೋಪಾಲ ಕೃಷ್ಣಸ್ವಾಮಿಯವರಿಗೆ ಮಾಮೂಲು ಪ್ರಕಾರ 25 ನೇ ತಾ|| ಲಾಗಾಯಿತು ನಡೆಯುತ್ತೆ. ತಾ|| 2-9-51 ನೇ ಭಾನುವಾರ ಪ್ರಾತಃಕಾಲ ಶ್ರೀ ಗೋವಿಂದ ರಾಜ ಪಟ್ಟಾಭಿಷೇಕ ಮಹೋತ್ಸವವೂ ಸಾಯಂಕಾಲ ಶ್ರೀ ರುಕ್ಮಿಣೀ ಕಲ್ಯಾಣ ಮಹೋತ್ಸವವೂ ನಡೆಯುತ್ತದೆ.

ತಿಂಗಳಿಗೆ ಎರಡಾಣೆ ಭತ್ಯ

ಸ್ಟೇಷನರಿ ವೆಚ್ಚಕ್ಕಾಗಿ ಕಸ್ಟಮ್ಸ್ ಡಿಪಾರ್ಟ್‌ಮೆಂಟಲ್ ಬ್ರಾಂಚ್‌ನ ಪೋಸ್ಟ್ ಮಾಸ್ಟರುಗಳಿಗೆ ತಿಂಗಳಿಗೆ ಎರಡಾಣೆ ಭತ್ಯವನ್ನು ಕೊಡಲಾಗುವದಾಗಿ ಉಪಮಂತ್ರಿ ಶ್ರೀ ರಾಜಬಹದ್ದೂರರು ಪಾರ್ಲಿಮೆಂಟ್ನಲ್ಲಿ ಮೊನ್ನೆ ತಿಳಿಸಿದರೆಂದು ಪೆಹಲಿ ವಾರ್ತೆ.

ಅಕ್ಕಿ ಕೊಡಿರೆಂದು ಮದರಾಸು ಕೇಳಲಿದೆ

ಮದರಾಸು ಸರ್ಕಾರ ಭಾರತ ಸರ್ಕಾರವನ್ನ ಹೆಚ್ಚು ಅಕ್ಕಿಗಾಗಿ ಕೇಳಿದೆ

ಈಗಿರುವ ಧಾನ್ಯ ದಾಸ್ತಾನು

ಭಾರತ ಸರ್ಕಾರದ ಬಳಿ ಆಹಾರ ಪಾಸ್ತಾನು ಹದಿನೈದು ಲಕ್ಷ ಟನ್ನುಗಳಿಗೆ ಏರಿದೆ.

ಮೋಟಾರು ವಾಹನಗಳ ಸಂಖ್ಯೆ

ಕಳೆದ ವರ್ಷದ ಕೊನೆಯಲ್ಲಿ ಭಾರತದಲ್ಲಿ 2 ಲಕ್ಷ ಮೋಟಾರು ವಾಹನಗಳು ಇದ್ದುವೆಂದು ಬೊಂಬಾಯಿ ವಾರ್ತೆ.

ಭಾರತದ ಪ್ರತಿಭಟನೆ ಪಾಕ್‌ಗೆ ತಲುಪಿತು

ಕರಾಚಿ : ಪೂರ್ವ ಬಂಗಾಳವನ್ನು ಹಿಂದೂಗಳು ಖಾಲಿ ಮಾಡುತ್ತಿರುವ ಕುರಿತು ಭಾರತ ಸರ್ಕಾರ ಕಳಿಸಿದ ಪ್ರತಿಭಟನೆ ಪಾಕಿಸ್ತಾನ ಸರ್ಕಾರಕ್ಕೆ ತಲುಪಿತು. ಅಲ್ಪ ಸಂಖ್ಯಾತರಿಗೆ ಆಗಿರುವ ಅಂಕ್ಷಣೆ ಭೀತಿಯನ್ನು ತಪ್ಪಿಸಲು ಪಾಕಿಸ್ತಾನ ಸರ್ಕಾರ ಕ್ರಮ ಕೈಗೊಳ್ಳುವದಾಗಿ ಗೊತ್ತಾಗಿದೆ

ಭಾರತದ ವಿಮಾನ ವ್ಯವಹಾರಾಯದ ಅಭಿವೃದ್ಧಿಗಾಗಿ ಬಂಗಾಳ ಕೊಲ್ಲಿಯಲ್ಲಿ ಕೆಲಸ ಮಾಡಲು ಭಾರತ ಸರ್ಕಾರದ ಕೋರಿಕೆ ಮೇರೆ ಜಪಾನಿನಿಂದ 340 ಟನ್ ತೂಕದ ಟ್ಯಾಲರು ಶಾಲವಾಗಿ ಒರುತ್ತದೆ

ರೈಲ್ವೆ ಮುಷ್ಕರದ ಬಗ್ಗೆ ಶ್ರೀ ಜಯಪ್ರಕಾಶನಾರಾಯಣರು ರೈಲ್ವೆ ಸಚಿವ ಶ್ರೀ ಅಯ್ಯಂಗಾರ್ಯರೊಡನೆ ಇದೇ 29 ರಿಂದ ಮಾತುಕತೆ ಪ್ರಾರಂಭಿಸಬಹುದೆಂದು ಜಯಪುರ ವಾರ್ತೆ

ತುಂಡಿ ಹಡಲಾರಿತನ ಮತ್ತು ನೆಹರು ರಾಜೀನಾಮೆ ಈ ಕುರಿತು ದಿಲ್ಲಿ ಎ ಐ ಸಿ ಸಿ. ನೆಹರುವಿಗೆ ಬೆಂಬಲಿಸುವುದೆಂದು ವಂದಿಯಾಗಿದೆ.

ಇಂಫಾಲಿನಲ್ಲಿ ಮೊನ್ನೆ ಸಾಧುಗಳಿಗೂ ಪೋಲೀಸರಿಗೂ ಘರ್ಷಣೆಯಾಗಿ ಮೂರು ಸಾವು ನಾಲ್ವರಿಗೆ ಗಾಯವೂ ಆಗಿದೆ

ದಿವ್ಯವಾಣಿ

ವಿಶ್ವವೊಂದು ಸುಂದರ ಹೊತ್ತಿಗೆ. ಆದರೆ ಅದನ್ನು ಪರಿಪಲಾಂದನನಿಗೆ ಅದರಿಂದೇನೂ ಪ್ರಯೋಜನವಾಗಿದಿರುವದನ್ನು ಯಾರು ಅಲ್ಲಗಳೆಯುವರು.

— ಚಿಂಗ್ ಚೌ.

ಪ್ರಭುಗಳಿಂದ ಉದ್ಘಾಟನೆ

ಮೈಸೂರು ಶ್ರೀಮನ್ಮಹಾರಾಜರವರು ಮುಂದಿನ ತಾಹೆ 7 ನೇ ತಾ|| ಬೆಳಿಗ್ಗೆ 10 ಗಂಟೆಗೆ ಮೈಸೂರು ಸಂಸ್ಥಾನದ ವಯಸ್ಕರ ಶಿಕ್ಷಣ ಸಂಮೇಳನದ 4 ನೇ ಅಧಿವೇಶನವನ್ನು ಉದ್ಘಾಟಿಸುವರು. ಈ ಸಂಮೇಳನ ಅಂದಿನಿಂದ ಮೂರು ದಿನಗಳ ಕಾಲ ಮೈಸೂರಿನಲ್ಲಿ ಜರುಗುವುದು.

ಸಿರಿಯರ್ಡರ ಸೂಚನೆ

ಸಿರಿಯದ ಇಪ್ಪತ್ತಾಲ್ಕು ಡಿವ್ಯುಟಿಗಳು ಕಾಶ್ಮೀರ ಬಗೆಗೆ ಪಾಕಿಸ್ತಾನಕ್ಕೆ ಬೆಂಬಲಿಸಿ ಪ್ರಧಾನಿ ಲಿಯಾಕತ್ ಅಲಿಗೆ ತಾರು ಕಳಿಸಿರುವದಾಗಿ ಡಮಾಸ್ಕಸ್ ವಾರ್ತೆ ಅದೇ ಡಿವ್ಯುಟಿಗಳು ಪಂ|| ನೆಹರುವಿಗೆ ತಾರು ಕಳಿಸಿ ಕಾಶ್ಮೀರದಿಂದ ಭಾರತ ಸೇನೆಯನ್ನು ಹಿಂದಕ್ಕೆ ತರಿಸಿಕೊಳ್ಳಬೇಕೆಂದು ಸೂಚಿಸಿದೆ.

ಹೂವಿನ ಅಳತೆ ಅಳತೆಪಟ್ಟಿಯಲ್ಲಿ ನಡೆಯಲಿ

ಮೈಸೂರಿನಲ್ಲಿ ಈಗ ಹೂವಿನ ವ್ಯಾಪಾರ ಮಾಡುವಾಗ ಮೂರು ಅಳತೆ ಕೊಡೋ ವಿಷಯದಲ್ಲಿ ದೊಡ್ಡ ಮೂರು ಚಿಕ್ಕ ಮೂರು ಇತ್ಯಾದಿಯಾಗಿ ಕೊಳ್ಳುವವರಿಗೆ ತುಂಬಾ ತ್ರಾಸವಾಗುತ್ತದೆ. ದೊಡ್ಡ ಮೂರು ಎಂದು ಹೂವು ಕೊಡುವಾಗ ಅಳತೆಗಾಗಿ ವ್ಯಾಪಾರಿ ಎರಡು ಕೈಗಳನ್ನು ಚಾಚಿ ಎದೆ ಮೇಲೆ ಹೂವನ್ನು ಎತ್ತಿ ಹಾಕಿಕೊಳ್ಳುವನು. ಪೂಜೆಗೆ ಆ ಹೂವು ಶೋಭಿಸಾತೆ? ಆದ್ದರಿಂದ ಇನ್ನು ಮುಂದೆ ಹೂವನ್ನು ಅಳತೆ ಪಟ್ಟಿ ಅಳತೆ ಮಾಡಿಕೊಡುವಂತೆ ಏರ್ಪಡಿಸಬೇಕು. ಮೈಸೂರು ಪೌರಸಭೆ ಮಾರ್ಕೆಟ್‌ನಲ್ಲಿ ಈ ಕ್ರಮ ಕೈಗೊಂಡು ಉಪಕರಿಸಿಯಾರೆ? — ಹೂ ಕೊಳ್ಳುವವರು

ಲಿಯಾಕತ್‌ರ ಉದ್ಗಾರ

ಪ್ರಧಾನಿ ಲಿಯಾಕತ್ ಮೊನ್ನೆ ಲಾಹೋರಿನಲ್ಲಿ ಹೇಳಿಕೆಯಿತ್ತು ವಿಶ್ವಭದ್ರತ ಮಂಡಲಿ ಕಾಶ್ಮೀರ ಬಗ್ಗೆ ಸೋಮಾರಿಯಾಗಿ ಕುಳಿತಿದೆ ಎಂದರು.

ಮುಷ್ಕರ

ಕಟಕ್ ವಿದ್ಯಾರ್ಥಿಗಳು ಪುನಃ ನಿನ್ನೆಯಿಂದ ಮುಷ್ಕರ ಆರಂಭಿಸಿರುವರು.

ಶಾಸನ ಸಭೆ

ಮುಂದಿನ ಮಾಹೆ 8 ರಿಂದ ಮೈಸೂರು ಶಾಸನ ಸಭೆ ಮೈಸೂರು ಕಾರ್ಪಡ್ ಹಾಲಿನಲ್ಲಿ ಆರಂಭವಾಗುವದು.

ಉಪವಾಸ ಪ್ರಯೋಜನವಿಲ್ಲ

ಭಾರತ ಪಾರ್ಲಿಮೆಂಟಿನಲ್ಲಿ ಪಂ|| ನೆಹರು ಹೇಳಿಕೆಯಿತ್ತು ಉಪವಾಸ ಮಾಡಿದ ಮಾತ್ರಕ್ಕೆ ಅಂಧ ಕೈಗೂಡುವದಿಲ್ಲ ಒಮ್ಮತ ವಿಶಾಲವಾಗಿರುವೆಡೆ ಪ್ರಾಂತ್ಯ ಯತ್ನಿಸುವೆವು – ಎಂದು ಪಂ|| ನೆಹರು ಸ್ವಾಮಿ ಸೀತಾರಾಮ ಉಪವಾಸ ಕುರಿತು ಆಚಾರ್ಯ ರಂಗ ತರಲೆತ್ತಿಸಿದ ನಿಲುವಳಿ ಕುರಿತು ನಿನ್ನೆ ತಿಳಿಸಿದರು.

ಹಶುವಿನ ಬೇಗೆಗೆ ಕಂಗೆಟ್ಟು ಮಗುವನ್ನು ಕೊಂದ

ದಾರಿದ್ರ್ಯ ಮತ್ತು ಉಪವಾಸಗಳ ಸಂಕಷ್ಟವನ್ನು ಸಹಿಸಲಾಗದೆ ಹಸಿವೆಯ ಬೇಗೆಗೆ ಕಂಗೆಟ್ಟು, ಮಧ್ಯಪ್ರದೇಶಕ್ಕೆ ಸೇರಿದ ರಾಯಪುರದ ಸಮೀಪವಿರುವ ಒಂದು ಹಳ್ಳಿಯಲ್ಲಿ ಒಬ್ಬ ಮುಸ್ಲಿಂ ಒಡಗಿಯು ತನ್ನ ಸ್ವಂತ ಮಗುವನ್ನು ಕೊಲ್ಲುವಷ್ಟು ನಿಷ್ಕರುಣಿಯಾದನು. ಸುಭಾ ಎಂದು ಆ ಒಡಗಿಯ ಹೆಸರು: ಉದ್ಯೋಗದಿಂದ ಅವನನ್ನು ನಿವೃತ್ತಿ ಪಡಿಸಲಾಗಿತ್ತು : ಹಲವು ಕಡೆಗಳಲ್ಲಿ ಉದ್ಯೋಗಕ್ಕಾಗಿ ಅವನು ನಡೆಸಿದ ಯತ್ನ ನಿಷ್ಫಲವಾಯಿತು : ನಿರುದ್ಯೋಗದಿಂದ ಉಪವಾಸದ ದರ್ದೆಶೆಯೂ ಬಂತು : ತನ್ನ ಕುಟುಂಬವನ್ನು ಉಪವಾಸದ ಬೇಗೆಯಿಂದ ಹೇಗೆ ತಪ್ಪಿಸುವುದೆಂಬುದು ಅನಸಿಗೆ ತೋಚದಾಯಿತು. ಹಲವು ದಿನಗಳ ಉಪವಾಸ ಸಹಿಸಿ ಏನಾರಿತು - ತದನಂತರ ದಿನ ತನ್ನ ಕುಟುಂಬದ ಸದಸ್ಯರನ್ನೆಲ್ಲಾ ಕೊಂದು ತಾನೂ ನಾಯುವುದೇ ದಾರಿದ್ರ್ಯದಿಂದ ವಿಮೋಚನೆ ಹೊಂದಲು ಸುಕರಮಾರ್ಗ ಉಪಾಯವೆಂದು ಅವನಿಗೆ ತೋಚಿತು : ಗದ್ದಲಿಯೊಂದನ್ನು ಹಿಡಿದು ಮೂರು ವರ್ಷದ ತನ್ನ ಗಂಡು ಮಗುವನ್ನು ಕೊಂದುಬಿಟ್ಟ. ಇತರ ಸದಸ್ಯರನ್ನೂ ಕೊಲ್ಲುವವನಿದ್ದ ; ಆದರೆ ಅವನ ದೊಡ್ಡ ವರನು ಬೊಬ್ಬಿಡಲು ನೆರೆಹೊರೆಯವರು ಅಲ್ಲಿ ನೆರೆದು ಮುಂದೆ ನಡೆಯಲಿದ್ದ ಘೋರ ದುರಂತವನ್ನು ತಪ್ಪಿಸಿದರು. ಸುಭಾ ಈಗ ದಸ್ಯಗೀಗೊಳಗಾಗಿದ್ದಾನೆ

ಪ್ಯಶಿಯಾದಲ್ಲಿ ಇರೆನ್‌ಡೊರ್ಫ್ ಎಂಬ ಗ್ರಾಮವಿದೆ ಈ ಗ್ರಾಮದ ಹೆಸರನ್ನು ಒದಲಾಯಿಸಬೇಕೆಂದು ಗ್ರಾಮಸ್ಥರು ಇತ್ತೀಚೆಗೆ ಚಳವಳಿ ಹೊಡಿದರು, ಇರೆನ್ ಡೊರ್ಫ್ ' ಎಂದರೆ ' ಹುಚ್ಚರ ಗ್ರಾಮ ಎಂಬರ್ಥವಂತೆ

ಸೆಪ್ಟಂಬರ್ ತಿಂಗಳು 7 ಮತ್ತು 8 ನೇ ತಾರೀಖುಗಳಲ್ಲಿ ಮೈಸೂರು ನಗರದಲ್ಲಿ ಅಖಿಲ ಭಾರತ ದಂತ ವೈದ್ಯರ ಕೇಂದ್ರ ಸಮಿತಿ ಸಭೆ ಸೇರಲಿದೆಯೆಂದು ಗೊತ್ತಾಗಿದೆ

ಭಾರತ ಪಾಕಿಸ್ತಾನಗಳು ಪುನಃ ಪರಸ್ಪರ ಮಾನಿಯಾರ್ಡರ್ ವ್ಯವಹಾರ ಆರಂಭಿಸಿದವು.

ಭಾರತ ಪಾರ್ಲಿಮೆಂಟಿನ ಕಾಂಗ್ರೆಸ್ ಪಕ್ಷ ನಿನ್ನೆ ದಿಲ್ಲಿಯಲ್ಲಿ ಸೇರಿದ್ದು ಪಂ|| ನೆಹರು ಧೀರ್ಘತೆಯಲ್ಲಿ ವಿಶ್ವಾಸವನ್ನು ಸಂಪೂರ್ಣವಾಗಿ ವ್ಯಕ್ತ ಮಾಡಿದೆಯೆಂದು ವಂದಿಯಾಗಿದೆ.



ಜಪಾನು ಒಪ್ಪಂದ ವಿಚಾರದಲ್ಲಿ ರಷ್ಯಾ ತೋರಿಸುತ್ತಿರುವ ಉದಾಸೀನ ಒಗ್ಗೆ ವ್ಯಂಗ್ಯ ಚಿತ್ರ

ರಣಜಿತ್

ಅಮೋಘ 3 ನೇ ವಾರ

ಮಧುಬಾಲ, ಪ್ರೇಮನಾಥ್, ನಟಿಸಿರುವ

ಮನಮೋಹನ ಹಿಂದಿ ಚಿತ್ರ

ಬಾದಲ್

BADAL

ಪ್ರತಿ ದಿನ 3 ಪ್ರದರ್ಶನಗಳು

OPERA Aug. 24 th

MACBETH

(William Shakespeare's Play)

Starring— Orson Welle, Jeanette Nolan

ಉಡ್‌ಲ್ಯಾಂಡ್ 24—8—51 ರಿಂದ

ಶಿಲ್ಪಿ

Soudaagar ಸೌದಾಗರ್

ಪಾತ್ರ— ದೇಹನಾ, ನಜೀರ್ ಖಾನ್, ಸೂರೈಯ, ಚೌದರಿ, ಬಾಡ್ಡು ಅದ್ವಾನಿ

ಹಾಡುಗಳು — ಸಂತೋಷಿ ಸಂಗೀತ — ರಾಮಚಂದ್ರ

ಸೊಗಸಾದ ಹಿಂದಿ ಚಿತ್ರ] [ಪ್ರತಿದಿನ 3 ಪ್ರದರ್ಶನಗಳು

"ಗೋರಕ್ಷಣ"

ಕಾರ್ಯ ಎಲ್ಲೆಲ್ಲೂ ನಡೆಯಲಿ

Protect the Cow

Edited, Printed and Published by M. S. Krishna Rao, at the Satyavadi Press Chamrajpuram Mysore